ಬುದಿರುವ ಪೂರಾ ಕಂದಾಯದ ಹಣವನ್ನು, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲಾ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ ಹರಾಜುದಾರರು ಸದರಿ ಸ್ವತ್ತಿನ ಸ್ವಾಧೀನವನ್ನು ಹೊಂದುವರು ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈ॥ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟು ಆತನಿಗೆ ಕೊಡಲ್ಪಡುವದು ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯ (ಲೋಪ) ಗಳಿಗೆ ಗವರ್ನಮೆಂಟನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲ್‌ನಲ್ಲಿ ಆಗುವ ಫೈನಲ್ ಹುಕುಮಿಗೆ ಬದ್ಧವಾಗಿ ಇರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರು.	ಭೂಮಿಯ ಸ್ವಭಾವ.	ಆಕಾರ.			ಸರಕಾರಕ್ಕೆ ಬರಬೇಕಾದ ಬಾಕೀ ಮೊಬಲಗು	ಹರಾಜು ಆಗುವ ತಾರೀಖು.	ಹರಾಜು ಆಗುವ ಸ್ಥಳ.
						ಎ.	ಗು.		ರೂ. ಆ. ಪೈ.		
ಮದ್ದಗಿರಿ	ವಿಡಿಗೇನಿ	ಕಾಯಂಗುತ್ತಾ ಕ್ರಿಷ್ಣಾಪುರ	ಸುರ್ಕಿಪ್ಪ	ಪೂರ್ತಿ ಗ್ರಾಮ.	ಖುಷ್ಕಿ	7	23	76	0 0	1906—07ನೆ ಸಾಲಿಗೆ ಜಮೆ ಖರ್ಚು	ರೂ. ಆ. ಪೈ. 71 1 0 1 0 0
					ತರಿ ...	8	15	28	0 0		
					ಬಾಗಾಯಿತು	29	33	104	0 0		
					ಪರಂಪೋಕು.	89	15	1	0 0		
					ಜುಮ್ಲಾ	206	6	209	0 0		72 1 0

ಚೆಕ್ಕು ಬಂದಿ.

ಪೂರ್ವಕ್ಕೆ—ನೀರಕಲ್ಲು.
ಪಶ್ಚಿಮಕ್ಕೆ—ಚಿನ್ನೇನಹಳ್ಳಿ.
ಉತ್ತರಕ್ಕೆ—ನೀರಕಲ್ಲು ಮತ್ತು ಚಿನ್ನೇನಹಳ್ಳಿ.
ದಕ್ಷಿಣಕ್ಕೆ—ನೀಲಿಪಳ್ಳಿ ಗ್ರಾಮ.

ಜಿಲ್ಲಾ ಸಬ್‌ನಂಬರ್. ಕೃಷ್ಣಾಪುರ.

ಎ. ವೆಂಕಟರಾವ್,
ಘಾರ್ ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು ನೆ ಜುಲೈ 1907.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ) ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ, ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಪ್ತಿದಾರರಿಗೆ ಹರಾಜು ನಿಲ್ಲುವದು.

2. ಪರಂತು ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರರು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ, ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ಪುನಃ ಹರಾಜ್ ಹಾಕಲ್ಪಡುವವು.

5. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕು ಉಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರ್ತಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುಕೂಫ್ ಮಾಡಲ್ಪಡತಕ್ಕದ್ದು.

6. ಡೆಪ್ಯೂಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮ್ಮಾದ್ದಾಗಿರುವದಿಲ್ಲವು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡಿ, ಹರಾಜನ್ನು ಡೆಪ್ಯೂಟಿ ಕಮಿಷನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರು ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲೀ ಅಂದಾಜಾ ಬೀಜವರಿ ನಿಷಯದಲ್ಲಾಗಲೀ ಇರುವ ಗಲ್ಲತ್ತು ಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ಲುಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 30 ದಿನಗಳೊಳಗಾಗಿ ಡೆಪ್ಯೂಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಜ್ಞೆಯ ರುಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು / ತಾಲ್ಲೂಕು	ಹೋಬಳಿ	ಗ್ರಾಮ	ಜೋಡೀದಾರರ ಹೆಸರು	ಪೂರಾಗ್ರಾಮದ ಅಂದಾಜಾ ಬೀಜವರಿ.	ಪೂರಾಗ್ರಾಮದ ಅಂದಾಜಾ ಹುಟ್ಟುವಳಿ ಇತ್ಯಾದಿ ಯಾ ಬೇರೀಜು.	ಸಾಲಿಯಾನಾ ಸರ್ಕಾರದ ಕಂದಾಯಕ್ಕೆ ಕೊಡಬೇಕಾದ ಕಿಸ್ತು ಕ್ವಿಟ್‌ರೆಂಟ್.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು, ಮೈರೆ.
				ಖಂ. ಕೊ	ರೂ.	ರೂ. ಆ.	ರೂ. ಆ. ಪೈ.	
ಹಾಸನ	ಹೊಳೇನರಸೀಪುರ	ಹಳೆಕೋಟೆ	1. ನರಸಪಂಡಿತ, 2. ಕೃಷ್ಣಪಂಡಿತ, 3. ನರಸಿಂಹಪಂಡಿತ.	565 9	356	273 1	997 3 5	1907ನೆ ಇಸವಿ ಅಗಸ್ಟು 6ನೆ ತಾರೀಖು ಹೊಳೇನರಸೀಪುರದ ತಾಲ್ಲೂಕು ಕಛೇರಿಯಲ್ಲಿ ಜನರಲ್ ಅಸಿಸ್ಟೆಂಟ್ ಕಮಿಷನರವರು ಅಥವಾ ಡೆಪ್ಯೂಟಿ ಕಮಿಷನರವರಿಂದ ನೇಮಕ ಮಾಡಲ್ಪಟ್ಟ ಇತರ ಅಧಿಕಾರಿಗಳು ಹರಾಜು ಕ್ರಯವನ್ನು ವಸೂಲು ನಡೆಸುವರು.

ಎ. ಕೃಷ್ಣಸ್ವಾಮಯ್ಯಂಗಾರ್,
ಫಾರ್ ಡೆಪ್ಯೂಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು ನೆ ಜುಲೈ 1907.

ಸ॥ 1907ನೆ ಇಸವಿ ಜುಲೈ ತಾರೀಖು 6ನೆ ಮುಕರ್ರಂನ ಬಾಬತು ಅಬ್‌ಸ್ಟ್ರಾಕ್ಟು ನೋಟಿಫಿಕೇಷನ್.

ಈ ಮಾರ್ಜಿನ್ನಲ್ಲಿ ನಮೂದು ಮಾಡಿರುವ ಇನಾಂ ಗ್ರಾಮಗಳು ಕಂದಾಯ ಬಾಕೀಗೋಸ್ಕರ ಅದರ ಬಾಜುದಲ್ಲಿ ನೋಟು ಮಾಡಿರುವ ತಾರೀಖುಗಳಲ್ಲಿ ಶಿವಮೊಗ್ಗ ತಾಲ್ಲೂಕು ಕಛೇರಿ ಬಳಿ ಹರಾಜು ಮಾಡಲ್ಪಡುತ್ತವೆ.

1. ಊರೆಗಡೂರು	... 15—8—07.	6. ಆನೆಹಳ್ಳಿ	... 16—8—07.
2. ತಾರೇಕಟ್ಟೆ	... ಡಿಟೋ	7. ತಟ್ಟಿಕೆರೆ	... 17—8—07.
3. ಕುಸ್ಕೂರು	... ಡಿಟೋ	8. ಗಾಜನೂರು	... ಡಿಟೋ
4. ಮತ್ತೂರು	... 16—8—07.	9. ಕುಡಗಲಮನೆ	... ಡಿಟೋ
5. ಹೊಸಹಳ್ಳಿ	... ಡಿಟೋ	10. ಭಂಡಾರಹಳ್ಳಿ	... 19—8—07.

ಈ ತಪಸೀಲು ತಿಳಿಯುವ ಬಗ್ಗೆ 1907ನೆ ಇಸವಿ ಜುಲೈ ತಾರೀಖು 16ನೆ ಮುಕರ್ರಂನ ಮೈಸೂರು ಗೆಜೆಟ್ಟು IIನೆ ಭಾಗದ ನಂ. 336, 337, 338, 339, 340, 341, 342, 343, 344, 345ನೆ ಪೇಜುಗಳಲ್ಲಿ ನೋಡಬೇಕು.

ಎ. ವೇದಾಂತದೇಸಿಕಂ ಐಯ್ಯಂಗಾರ್,
ಫಾರ್ ಡೆಪ್ಯೂಟಿ ಕಮಿಷನರ್.